ತನ್ನಿಂದಲೇ ಆಗಿದ್ದು, ಎಂದು ಕೊಚ್ಚಿಕೊಳ್ಳುವುದು, ನೋಡು ನಿಂಗೊಂದು ದಾರಿ ತೋರಿಸಿದ್ದೇ ನಾನು ಅಂತ ಗಿರಿಧರನ ಮುಂದೆ ತನ್ನ ವರ್ಚಸ್ಸಿನ ಬಗ್ಗೆ ಪೀಪಿ ಊದುವುದು, ಇವ್ಯಾವುದನ್ನು ಮಾಡುವ ಜಾಯಮಾನ ನಾಯ್ಕರದ್ದಾಗಿರಲಿಲ್ಲ. ಹಾಗಾಗಿ ಅವರು ದೂರದಿಂದಲೇ ಇವನ್ನೆಲ್ಲಾ ನೋಡುತ್ತ ಅವರ ಪಾಡಿಗಿದ್ದುಬಿಟ್ಟರು.

ಸಾಗರದಿಂತಿರುವ ಪೇಟೆ ಕೊಡುವ ಅವಕಾಶ, ನೀಡುವ ಸ್ವಾತಂತ್ರ್ಯ, ಎಲ್ಲವೂ ವಿಶಿಷ್ಟ ಅನ್ನಿಸತೊಡಗಿತು ಗಿರಿಧರನಿಗೆ. ಇನ್ನು ಒಂದಷ್ಟು ಹೆಸರು ಬಂದರೆ ಹೇಳಬೇಕೇ? ಆಯಾ ಊರಿನ ಸನ್ಮಾನ, ಶಾಲು, ಹೊದಿಕೆ, ಹೊಗಳಿಕೆಯ ಹಾರ ತುರಾಯಿಗಳೆಲ್ಲಾ ಆವರಿಸಿಕೊಂಡಾಗ ಸ್ವರ್ಗದಲ್ಲೇ ಬಂದು ಬದುಕುತ್ತಿದ್ದೇನೆ ಎನ್ನುವ ಆಹ್ಲಾದಕರ ಅನುಭವದಲ್ಲಿ ತೇಲಿಹೋದ. ಅವನು ಯಕ್ಷಗಾನದಲ್ಲಿ ಇಷ್ಟೊಂದೆಲ್ಲಾ ಸಿಗುತ್ತದೆ ಅಂತೆಲ್ಲಾ ಅಂದುಕೊಂಡೇ ಇರಲಿಲ್ಲ. ಅಷ್ಟೊತ್ತಿಗೆ ಊರೂರುಗಳಲ್ಲಿ ಎಲ್ಲರ ಕೈಯಲ್ಲೂ ಮೊಬೈಲುಗಳು ಉತ್ತುಂಗ ಸ್ಥಿತಿಗೆ ಬಂದಿತ್ತು. 'ಸ್ವರ ಗಂಧರ್ವರ್ವ ಸೀತಾನದಿ ಗಿರಿಧರ ಭಾಗವತರ ಅಬ್ಬರದ ಹಾಡಿದು 'ಯಕ್ಷಗಾನ ಮಾಣಿಕ್ಯ ಗಿರಿಧರ ಭಾಗವತರ ಈ ಹಾಡು ಕೇಳಿದ್ರೆ ಅಬ್ಬಾ ಅಂತೀರಾ', 'ಸ್ವರನಿಧಿ ಗಿರಿಧರ ಭಾಗವತರ ಮೈನವಿರೇಳಿಸೋ ಪದ್ಯವಿದು', ಅಂತೆಲ್ಲಾ ವೈಭವೋಪೇರಿತ ಸಾಲುಗಳು, ಇವನ ಹಾಡಿನ ತುಣುಕುಗಳೆಲ್ಲಾ ಎಲ್ಲೆಡೆ ಹರಿದಾಡಿದಾಗ ಜನ ಆ ಪ್ರಚಾರದ ಅಮಲಿನಲ್ಲಿ ಹುಬ್ಬೇರಿಸಿಕೊಂಡು ಇವನನ್ನು ಹೊಸತಾಗಿ ನೋಡತೊಡಗಿದರು. ಆದರೆ ಇಡೀ ಅವನನ್ನೇ ಬದಲಿಸಿದ್ದು 'ಜ್ಯೂನಿಯರ್ ಕಾಳಿಂಗ ನಾವಡ ಗಿರಿಧರ ಭಾಗವತ, ಮತ್ತೆ ಹುಟ್ಟಿದನು ಕಾಳಿಂಗ' ಎನ್ನುವ ಸಾಲುಗಳು.

ಹೀಗೆ ಸಾಮಾಜಿಕ ಜಾಲತಾಣದಲ್ಲೆಲ್ಲಾ ಬಿರುದು ಪಡೆದಾಗ ಗಿರಿಧರ ಹಿಗ್ಗಿ ಹೀರೇಕಾಯಿಯಂತಾದ. ತನ್ನನ್ನೇ ಒಮ್ಮೆ ಕನ್ನಡಿಯಲ್ಲಿ ನೋಡಿಕೊಂಡು, ಕೂತಲ್ಲೇ ಕರುಣಾರಸದ ಪದ್ಯದನ್ನೊಮ್ಮೆ ಗಟ್ಟಿ ಸ್ವರದಲ್ಲಿ ಹಾಕಿ ಸ್ವತಃ ಕೇಳಿಸಿಕೊಂಡು, ಕಾಳಿಂಗ ನಾವಡರಂತಿದೆಯಾ ನನ್ನ ಸ್ವರ ಎಂದು ಎಷ್ಟೋ ಬಾರಿ ಕೇಳಿಕೊಂಡ. ಕೊನೆಗೆ ಹಾಗೆ ಕೇಳಿಕೊಂಡು ಕೇಳಿಕೊಂಡು ಹೌದು

